ಎಂದು ಚಡಪಡಿಸುತ್ತಿದ್ದ. ಕೆಲಸಕ್ಕೆ ಹೊಸದಾಗಿ ಮರ್‍ನಾಲ್ಕು ಹುಡುಗರು ಸೇರಿಕೊಂಡಿದ್ದರು. ಮಾದೇವನಿಗೆ ಊಟಕ್ಕೂ ಸಮಯವಿರಲಿಲ್ಲ. ಧರೆಪ್ಪ ಒಂದಿಲ್ಲೊಂದು ಕೆಲಸ ಅವನಿಗೆ ಹೇಳುತ್ತಲೇ ಇರುತ್ತಿದ್ದ. ಸಾಯಂಕಾಲ ತಂಗುದಾಣಕ್ಕೆ ಹೋಗಿ ತನ್ನ ಮುದ್ದಿನ ನಾಯಿಗೆ ಭೇಟಿಯಾಗಲು ಆಗದೇ ಇರುವುದಕ್ಕೆ ಕಳವಳಗೊಂಡಿದ್ದ.

ಅವತ್ತು ಮಧ್ಯಾಹ್ನ ಏಳೆಂಟು ಜನ ಮುನಿಸಿಪಾಲಿಟಿ ಅಧಿಕಾರಿಗಳು ಊಟಕ್ಕೆ ಬಂದರು. ಮಾದೇವ ಎಲ್ಲರಿಗೂ ತಾಟು ಕೊಟ್ಟು, ರೊಟ್ಟಿ, ಪಲ್ಯ, ಮೊಸರು ಹಾಕಿದ. ಅದರಲ್ಲೊಬ್ಬ ಸೂಟು ಬೂಟು ಹಾಕಿಕೊಂಡಿದ್ದ ಬೋಳು ತಲೆಯ ಅಧಿಕಾರಿ 'ಏ... ನೀ ಮಾದ್ಯಾ ಅಲಾ?' ಅಂದ. ಮಾದೇವನಿಗೆ ತಕ್ಷಣಕ್ಕೆ ಅವನನ್ನು ಗುರುತಿಸಲು ಆಗಲಿಲ್ಲ. ಮತ್ತೇನೋ ನೆನಪಿಸಿಕೊಂಡು 'ನೀ ಸಣ್ಣಾಂವ ಇದ್ದಾಗ ನಮ್ಮ ಮನೀಗಿ ಟೀವಿ ನೊಡ್ಲಾಕ ಬರ್ತಿದ್ದಿ... ಅಲ?' ಎಂದ. ಮಾದೇವ ತಲೆ ಅಲ್ಲಾಡಿಸಿ ಹ್ಞೂಂ... ಎಂದಷ್ಟೇ ಹೇಳಿ ಅವನೊಡನೆ ಮಾತು ಮುಂದುವರೆಸಲು ಆಸಕ್ತಿ ತೋರಿಸಲಿಲ್ಲ. ಊರಿನ ಯಾವ ನೆನಪುಗಳು ತನಗೆ ಬೇಡವೆಂದು ಊರು ಬಿಟ್ಟು ಬಂದವನಿಗೆ ಬಾಲ್ಯದ ದಿನಗಳನ್ನು ಕಣ್ಮುಂದೆ ತಂದ ಈ ಅಧಿಕಾರಿಯ ತಲೆಮೇಲೆ ಕೈಯಲ್ಲಿರುವ ಸೌಟಿನಿಂದ ಕುಟ್ಟುವಷ್ಟು ಸಿಟ್ಟು ಬಂದಿತ್ತು. ಸ್ವಲ್ಪ ಹೊತ್ತಿನಲ್ಲಿ ಆ ಅಧಿಕಾರಿ ತಾಟು ಹಾಗೇಯೇ ಇರಿಸಿ, ಊಟ ಮಾಡದೆ ಗಲ್ಲಾ ಮೇಲೆ ಕೂತಿದ್ದ ಧರೆಪ್ಪನ ಬಳಿ ಹೋಗಿ ಏನೋ ಪಿಸುಗುಟ್ಟಿ ಹೊರಗೆ ಹೋದ.

ಶೆಡ್‌ನಲ್ಲಿ ಅಂಗಾತ ಮಲಗಿದ್ದ ಮಾದೇವನಿಗೆ ಆ ದಿನ ರಾತ್ರಿ ನಿದ್ರೆ ಬರಲಿಲ್ಲ. ಸಣ್ಣವನಿದ್ದಾಗ ಹತ್ತಾರು ಮನೆಗಳಿಗೆ ಟೀವಿ ನೋಡಲು ಹೋಗಿರುವೆ. ಇವನನ್ನು ಎಲ್ಲಿಯೂ ನೋಡಿದ್ದು ನೆನಪಿಲ್ಲ. ಯಾರಿರಬಹುದು? ಊಟ ಮಾಡದೇ ಯಾಕೆ ಹೋದ? ತನ್ನ ಬಗ್ಗೆ ಶಾಕಾನ ಮುಂದೆ ಏನು ಚಾಡಿ ಹೇಳಿದ? ಅಷ್ಟದಿಕ್ಕುಗಳಿಂದ ಹತ್ತಾರು ಯೋಚನೆಗಳು ಅವನ ಮೇಲೆ ಆಕ್ರಮಣ ಮಾಡಿ ಮನಸ್ಸನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದವು. ಟೀವಿ ಎಂದರೆ ನೆನಪಾಗುವುದು ಅವನಿಗೆ ಅದೊಂದೇ ಘಟನೆಯಾಗಿತ್ತು. ಆಗವನು ಹೆಚ್ಚುಕಡಿಮೆ ಹತ್ತು ಹನ್ನೊಂದು ವರ್ಷದ ಹುಡುಗನಿರಬಹುದು. ಕರೆಂಟ್ ಬಂದರೆ ಸಾಕು ಟೀವಿ ಇರುವ ಮನೆಗಳಿಗೆ ಓಡಿ ಹೋಗಿ ಕೂತು ಬಿಡುತ್ತಿದ್ದ. ಅವತ್ತು ಕಿರಾಣಿ ಅಂಗಡಿ ಹಣಮಂತ ಸಾವ್ಕಾರ ಮನೆಗೆ ಟೀವಿ ನೋಡಲು ಹೋಗಿದ್ದ. ಎತ್ತರವಿದ್ದ ಹುಡುಗರು ಮುಂದೆ ಕೂತಿದ್ದರಿಂದ ಅವನಿಗೆ ಏನೇನೂ ಕಾಣುತ್ತಿರಲಿಲ್ಲ. ತುದಿಗಾಲ ಮಂಡಿಲೆ ಕೂತು ಸಾಕಾಯಿತು. ಟೀವಿಯಲ್ಲಿ ಜಾಹಿರಾತು ಬರುವುದೇ ತಡ ಬೇರೆ ಮನೆಗೆ ಹೋದರಾಯಿತೆಂದು ಎದ್ದು ಹೊರಗೆ ಓಡಿದ. ಕಿರಾಣಿ ಅಂಗಡಿಯಲ್ಲಿ ಕೂತಿದ್ದ ಹಣಮಂತ ಸಾವ್ಕಾರ ಸಂಶಯದಿಂದ 'ಏ ನಿಂದ್ರೊ... ಯಾರ ಚಪ್ಲಿ ಹಾಕೊಂಡೀದಿ?' ಎಂದು ಮಾದೇವನನ್ನು ಹಿಡಿದು ಕೇಳಿದ.

ಮಾದೇವ ತನ್ನ ಕಾಲಲ್ಲಿಯ ಚಪ್ಪಲಿಯನ್ನು ಮತ್ತೊಮ್ಮೆ ನೋಡಿ ಅಂಜುತ್ತ 'ನನ್ನೂನೇ ಆವ್ರಿ' ಎಂದ. 'ಸುಳ್ಳು ಹೇಳ್ತಿ ಮಗ್ನಾ... ನಿನ್ನೇನೆ ಬರಗಾಲಿನಲ್ಲಿ ಬಂದಿದ್ದಿ... ಕಳ್ಳತನ ಮಾಡ್ಲಕ ಬರ್ತಿ ಕಾಣ್ತದ ನೀ? ಇನ್ನೊಂದು ಸಲ ನಮ್ಮ ಮನೀ ಹೊಸ್ತಲು ತುಳ್ದಿ ಅಂದ್ರ... ಇಲ್ಲಿ ಕಾಣ್ತದಲ ಈ ಹಗೆದಾಗ ಹಾಕಿ ಮುಚ್ಚಿ ಬೀಡ್ತಿನಿ' ಎಂದು ಬೆನ್ನು ಮತ್ತು ಕುಂಡೆಯ ಮೇಲೆ ರಫ್... ರಫ್... ಹೊಡೆದು ಅವನ ಕಾಲಲ್ಲಿಯ ಚಪ್ಪಲಿ ಕಿತ್ತು ಕಳಿಸಿದ. ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ವಿಚಲಿತಗೊಂಡಿದ್ದ ಮಾದೇವ ಒಂದೇ ಸಮನೇ ಅಳುತ್ತಿದ್ದ. ಈ ಸುದ್ದಿ ದುಂಡವ್ವ ಆಯಿ ತನಕ ಹೋಯಿತು. ಅವಳು ಬಂದು ಮನಸಲ್ಲಿ ಸಿಟ್ಟಿದ್ದರೂ ಅಸಹಾಯಕತೆಯಿಂದ 'ಸಾವ್ಕಾರ... ಮೊನ್ನೆ ರವಿವಾರ ಸಂತ್ಯಾಗ ಕೊಡಸೀನ್ರಿ ಯಪ್ಪಾ?' ಎಂದಳು. ಹಣಮಂತ ಸಾವ್ಕಾರನಿಗೆ ತಾನು ದುಡುಕಿದ್ದೇನೆಂಬುದು ಅರಿವಾಗಿತ್ತು. ನಾಲಿಗೆ ಸವರುತ್ತಾ 'ಇನ್ನೊಂದು ಸಲ ಚಪ್ಪಲಿ ಹಾಕೊಂಡು ಬರಬ್ಯಾಡ ಹೋಗು' ಎಂದು ಜಬರಿಸಿದ. ದುಂಡವ್ವ 'ಅವು ಚಪ್ಲಿ ಹಾಕೋ' ಎಂದರೂ ಮಾದೇವ ಅವನ್ನು ತಿರುಗಿಯೂ ನೋಡಲಿಲ್ಲ. ಅವನ ಅಂಗಿ ಕಳೆದು ಬೆನ್ನ ಮೇಲೆ ಮೂಡಿದ ಬಾಸುಂಡೆಗಳನ್ನು ನೋಡುತ್ತ 'ಪರದೇಶಿ ಕೂಸಿಗೆ ಹ್ಯಾಂಗ್ ಹೊಡದಾನ ನೋಡು.. ಇವನಿಗೆ ಬರಬಾರ್ದು ಬರ್ಲಿ... ಹಾಂಟ್ಯಾನ ಮಗಾ' ಎಂದು ಗೊಣಗುತ್ತ ಮಾದೇವನ ಕೈ ಹಿಡಿದು ದುಂಡವ್ವ ಮನೆ ಹಾದಿ ಹಿಡಿದಳು. ಆ ಘಟನೆಯ ನಂತರ ಮಾದೇವ ಒಂದೇ ಒಂದು ದಿನವೂ ಚಪ್ಪಲಿ ಹಾಕಿರಲಿಲ್ಲ.

* * *